ಆಗಾಗ ನಮ್ಮ ನಡುವೆ ಮೌನಗಳಿರುತ್ತಿದ್ದುವು. ಎರಡು ಬಾರಿ ಆಕೆ ನಿದ್ದೆಯ ಪಾಲಾಗಿರಬಹುದು ಅಂತ ಅಂದುಕೊಂಡೆ. ಆದರೆ ಒಂದು ಕ್ಷಣದ ಮಟ್ಟಿಗೆ ಮಾತ್ರ ಮುಚ್ಚಿದ ಆಕೆಯ ಕಣ್ಣು ಮತ್ತೆ ಜೀವಂತವಾಗುತ್ತಿದ್ದುವು. ಅವಳಿಗೆ ಸುಸ್ತಾಗಲೀ, ನಿದ್ದೆಯಾಗಲೀ ತಟ್ಟಿರಲಿಲ್ಲ. ಕಣ್ಣು ಮುಚ್ಚುತ್ತಿದ್ದದ್ದು ಸಹಜವಾಗಿ, ಮತ್ತು ಇನ್ನಷ್ಟು ಸ್ಪಷ್ಟವಾಗಿ ನೋಡುವ ಸಲುವಾಗಿ ಎನ್ನುವಂತೆ ಚಂಗನೆ ಮಾತಾಡುತ್ತಿದ್ದಳು. ಹೀಗೆ ಮಾತಾಡುತ್ತಿದ್ದಾಗ ಒಂದೆರಡು ಬಾರಿ ನಾನು ಆಕೆಯಲ್ಲಿ ತಲ್ಲೀನನಾಗಿದ್ದದ್ದನ್ನು ಗಮನಿಸಿದಳು ಅನ್ನಿಸುತ್ತದೆ. ಆಗ ಆಕೆ ಕಣ್ಣನ್ನು ಮುಚ್ಚಿದ್ದಳು. ಅವಸರದಲ್ಲಿ ಮುಚ್ಚಿದಳೋ, ಸಹಜವಾಗಿ ಮುಚ್ಚಿದಳೋ ನೆನಪಾಗುತ್ತಿಲ್ಲ. ಅಂದಿನ ಸಂಜೆಯ ಕೆಲವು ನೆನಪುಗಳು ಗೊಂದಲಮಯವಾಗಿ ಮಸುಕಾಗಿವೆ. ಒಮ್ಮೊಮ್ಮೆ ನಾನು ವಿರೋಧಾಭಾಸದಿಂದ ಮಾತಾಡುತ್ತೇನೆ. ತಲೆ ತಿರುಗುತ್ತದೆ. ಒಮ್ಮೆ ಆಕೆ ತೀವ್ರ ಸಂಭಾಷಣೆಯಲ್ಲಿ ತೊಡಗಿದ್ದ (ಮತ್ತೇನೂ ಇಲ್ಲದ) ಸಮಯದಲ್ಲಿ ಇದ್ದಕ್ಕಿದ್ದಂತೆ ಸುಂದರಿ, ಅತಿಸುಂದರಿಯಾಗಿ ಕಂಡದದ್ದು ಸ್ಪಷ್ಟವಾಗಿ ನೆನಪಿದೆ. ಅವಳು ಕೈಕಟ್ಟಿ ಎದ್ದು ನಿಂತಳು. ನಾನೂ ಗೌರವದಿಂದ ಎದ್ದು ನಿಲ್ಲಲು ತಯಾರಾದೆ. ಆಕೆ ನನ್ನನ್ನು ತಡೆಯಲು ನನ್ನ ಭುಜದ ಮೇಲೆ ಕೈ ಹಾಕಿದಳು. ನಾನು ತಕ್ಷಣ ಕೂತುಬಿಟ್ಟೆ. ಆಗ ಆಕೆ ಏನಾದರೂ ಹೇಳಬಹುದು ಅಂತ ಅನ್ನಿಸಿತು. ಆದರೆ ಚಳಿಯಿಂದ ನಡುಗಿದಂತೆ ಒಮ್ಮೆ ನಡುಗಿ, ಬೆನ್ನು ತಿರುಗಿಸಿ ನಾನು ಕೂತು ಓದುತ್ತಿದ್ದ ಕುರ್ಚಿಯ ಮೇಲೆ ಹೋಗಿ ಕೂತಳು. ಸೋಫಾದ ಮೇಲಿದ್ದ ಕನ್ನಡಿಯನ್ನು ನೋಡುತ್ತಾ ಗೋಡೆಯ ಮೇಲೆ ತೂಗು ಹಾಕಿದ್ದ ಎರಡು ಕೆತ್ತನೆಗಳ ಬಗ್ಗೆ ಮಾತಾಡಲು ಪ್ರಾರಂಭಿಸಿದಳು.



‘ಇವುಗಳು ಹಳೆಯದಾಗಿಬಿಟ್ಟಿವೆ. ಹೊಸತನ್ನು ಕೊಂಡು ತರಬೇಕೆಂದು ನಾನು ಶಿಕಿನ್ಯುಗೆ ಹೇಳಿದ್ದೇನೆ’.

ಶಿಕಿನ್ಯು ಆಕೆಯ ಗಂಡನ ಅಡ್ಡಹೆಸರು. ಅಲ್ಲಿದ್ದ ಕೆತ್ತನೆಯ ಚಿತ್ರಗಳು ಆತನ ಮೂಲ ಆಸಕ್ತಿಯ ಬಗ್ಗೆ ಬಹಳಷ್ಟು ಹೇಳುತ್ತಿತ್ತು. ಒಂದರಲ್ಲಿ ಕ್ಲಿಯೊಪಾತ್ರ ಇದ್ದಳು. ಮತ್ತೊಂದರ ವಿಷಯ ನನಗೆ ನೆನಪಾಗುತ್ತಿಲ್ಲ. ಆದರೆ ಅದರಲ್ಲೂ ಹೆಂಗಸರಿದ್ದರು. ಎರಡೂ ನೀರಸವಾಗಿದ್ದುವು. ಆಗಿನ ದಿನಗಳಲ್ಲಿ ಅವು ಕುರೂಪವಾಗಿದ್ದುವು ಅನ್ನೋದು ನನಗೆ ಗೊತ್ತಿರಲಿಲ್ಲ.

‘ಹೌದು. ಇವು ಚೆನ್ನಾಗಿವೆ’ ನಾನು ಹೇಳಿದೆ.

‘ಆದರೆ ಅವುಗಳ ಮೇಲೆ ಕಲೆಗಳಾಗಿದೆ. ಮೇಲಾಗಿ, ನಿಜ ಹೇಳಬೇಕೆಂದರೆ ನನಗೆ ಸಂತರ ಚಿತ್ರಗಳೇ ಹೆಚ್ಚು ಇಷ್ಟ. ಈ ಚಿತ್ರಗಳು ಹಜಾಮರಂಗಡಿಯ ಹಿಂದಿನ ಪಡ್ಡೆ ಹುಡುಗರ ಮನೆಗಳಿಗೆ ಹೊಂದುತ್ತವೆ’

‘ಹಜಾಮರಂಗಡಿ, ಸಲೂನು... ನೀನು ಯಾವತ್ತೂ ಅಲ್ಲಿಗೆ ಹೋದಹಾಗೆ....’

‘ಕೂದಲು ಕತ್ತರಿಸಿಕೊಳ್ಳಲು ಕಾಯುತ್ತಾ ಹುಡುಗರು ಏನು ಮಾತಾಡುತ್ತಾರೆಂದು ನಾನು ಊಹಿಸಬಲ್ಲೆ – ಹುಡುಗಿಯರು ಮತ್ತು ಲಲ್ಲೆ.. ಸಹಜವಾಗಿಯೇ ಅಂಗಡಿಯ ಮಾಲೀಕ ಅವರಿಗಿಷ್ಟವಾಗುವ ಚಿತ್ರಗಳನ್ನು ತೂಗುಹಾಕಿ ಅವರನ್ನು ಖುಷಿ ಪಡಿಸುತ್ತಾನೆ. ಆದರೆ ಅಂಥ ಚಿತ್ರಗಳು ಮನೆಗೆ ಸಂದದ್ದಲ್ಲ. ಅದು ನನ್ನ ವಿಚಾರ, ಆದರೆ ನನಗೂ ವಿಚಿತ್ರ ವಿಚಾರಗಳು ಹೊಳೆಯುತ್ತಿರುತ್ತವೆ. ಏನಾದರಾಗಲಿ ನನಗೆ ಅವು ಇಷ್ಟವಾಗುವುದಿಲ್ಲ. ಅವರ್ ಲೇಡಿ ಆಫ್ ಇಮ್ಮಾಕ್ಯುಲೇಟ್ ಕನ್ಸೆಪ್ಷನ್ – ನನ್ನ ಸಂತ ದಯಾಳುವಿನ ಚಿತ್ರ ನನ್ನ ಹತ್ತಿರವಿದೆ. ತುಂಬಾ ಸುಂದರವಾಗಿದೆ. ಆದರೆ ಅದೊಂದು ಪ್ರತಿಮೆ. ಅದನ್ನು ಗೋಡೆ ಮೇಲೆ ತೂಗು ಹಾಕಲು ಸಾಧ್ಯವಿಲ್ಲ. ಅದು ಇಲ್ಲಿರಬೇಕೆಂದು ನಾನು ಬಯಸುವುದೂ ಇಲ್ಲ. ಅದನ್ನು ನನ್ನ ಪೂಜಾ ಮಂದಿರದಲ್ಲಿರಿಸಿದ್ದೇನೆ’.

ಪೂಜಾಮಂದಿರವೆಂದ ಕೂಡಲೇ ನನಗೆ ಪ್ರಾರ್ಥನೆಯ ನೆನಪಾಯಿತು. ಹೊರಡುವ ಸಮಯವಾಯಿತು ಅನ್ನಿಸಿ ಆ ಮಾತನ್ನು ಎತ್ತಬೇಕೆಂದಿದ್ದೆ. ಮಾತಾಡಲು ಬಾಯಿ ತೆಗೆದವನು ಮಾತು ಹೊರಬರುವ ಮುನ್ನವೇ ನನ್ನಾತ್ಮಕ್ಕೆ ಮತ್ತುಂಟು ಮಾಡುವ ಅವಳ ಘನ, ಮೃದು ಮತ್ತು ಮಧುರ ಮಾತುಗಳನ್ನು, ನಿರಂತರವಾಗಿ ಕೇಳುತ್ತಲೇ ಇರಬೇಕೆನ್ನಿಸಿ ಬಾಯಿ ಮುಚ್ಚಿದೆ. ಸಣ್ಣ ಮಗುವಾಗಿ, ಯುವತಿಯಾಗಿ, ಧರ್ಮದ ಬಗ್ಗೆ ಆಕೆಯ ಭಕ್ತಿ, ಪಕ್ಕೆಟ್ಟ ದ್ವೀಪಕ್ಕೆ ಯಾತ್ರೆಗಳು, ಹಾಡು ಮತ್ತು ಕುಣಿತ – ಎಲ್ಲದರ ಬಗ್ಗೆ ಯಾವುದೇ ವಿರಾಮವಿಲ್ಲದೇ ಎಲ್ಲವನ್ನೂ